ಹಾಗಾಗಿ ಸ್ವಲ್ಪ ತೊಂದರೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಅಲ್ಲಿಗೆ ಕಾಣುವುದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಿ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಅಪ್ರತ್ಯಕ್ಷವಾಗಿ ಮಾನ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಒಂದು ಮಲತಾಯಿ ಧೋರಣೆಯನ್ನು ಒಪ್ಪಿದ್ದಾರೆ. ನಾನಾದರೂ ತಮಗೆ ಮನವಿ ಮಾಡಿಕೊಳ್ಳುವುದು ಒಂದೇ.

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ನಾನು ಎಲ್ಲಿ ಒಪ್ಪಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ನಾನಾದರೂ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೇ. ಕೇಂದ್ರ ಸರ್ಕಾರದವರು 1972ರ ನಂತರ 1993ನೇ ಇಸವಿಯವರೆಗೂ ಇಡೀ ರಾಷ್ಟ್ರದಲ್ಲಿ ಎಷ್ಟು ರಾಷ್ಟ್ರೀಯ ಹೆದ್ದಾರಿಯನ್ನು ಮಾಡಿದ್ದಾರೆ. ಯಾವ ಯಾವ ರಾಜ್ಯಗಳಲ್ಲಿ ಮಾಡಿದ್ದಾರೆ ಎನ್ನುವ ಮಾಹಿತಿಯನ್ನು ದಯವಿಟ್ಟು ಸದನಕ್ಕೆ ದಯಪಾಲಿಸಬೇಕೆಂದು ತಮ್ಮಲಿ ವಿನಂತಿ ಮಾಡಿಕೊಳ್ಳುತ್ತೇನೆ.

Sri. K. H. Ranganath : I Want notice for that.

ವಿಷಯ : ರಾಜ್ಯದಲ್ಲಿ ರೈತರ ಪಂಪುಸೆಟ್ಟುಗಳಿಗೆ ಮೀಟರ್.

Q : 1256

ಶ್ರೀ ಹು. ಯು. ಮೇಟಿ (ಗುಳೇದಗುಡ್ಡ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ಮೀಟರ್ ಅಳವಡಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ಮೀಟರ್ ಅಳವಡಿಸಲು ಬೇಕಾಗುವ ಹಣವೆಷ್ಟು?

ಇ) ಮೀಟರ್ ಅಳವಡಿಸಿ ಮೀಟರ್ ದರದಲ್ಲಿ ಬಿಲ್ ಪಾವತಿ ಮಾಡುವಂತೆ ಜಾರಿಗೆ ತರುವುದರಿಂದ ರೈತರ ವಿರುದ್ಧ ಧೋರಣೆ ತಾಳಲಿಲ್ಲವೇ?

ಈ) ಹಾಗಿದ್ದಲ್ಲಿ, ರೈತರ ಪಂಪುಸೆಟ್ಟುಗಳಿಗೆ ಮೀಟರ್ ಅಳವಡಿಸುವುದನ್ನು ಕೈ ಬಿಡಲು ಸರ್ಕಾರದವರು ಯೋಜಿಸುವರೇ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹಾಲಿ 10 ಅಶ್ವಶಕ್ತಿಗಿಂತಲೂ ಹೆಚ್ಚಿನ ಸಾಮರ್ಥ್ಯದ ರೈತರ ಪಂಪುಸೆಟ್ಟುಗಳಿಗೆ ಮಾತ್ರ ವಿದ್ಯುತ್ ಮೀಟರನ್ನು ಅಳವಡಿಸುತ್ತಿದ್ದು, 10 ಅಶ್ವಶಕ್ತಿ ಮತ್ತು ಅದಕ್ಕೂ ಕಡಿಮೆ ಸಾಮರ್ಥ್ಯದ ರೈತರ ಪಂಪು ಸೆಟ್ಟುಗಳಿಗೆ ವಿದ್ಯುತ್ ಮೀಟರುಗಳನ್ನು ಅಳವಡಿಸುತ್ತಿದೆ. ಈ ವರ್ಗದ ಪಂಪು ಸೆಟ್ಟುಗಳಿಗೆ ವಿದ್ಯುತ್ ಮೀಟರನ್ನು ಅಳವಡಿಸುವ ವಿಚಾರ ಇನ್ನೂ ಪರಿಶೀಲನೆಯಲ್ಲಿದೆ. ಯಾವ ತೀರ್ಮಾನವನ್ನೂ ತೆಗೆದುಕೊಂಡಿಲ್ಲ.

ಪ್ರಶ್ನೆಯ (ಅ) ಭಾಗಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಹೆಚ್. ವೈ. ಮೇಟಿ : ಮಾನ್ಯ ಅಧ್ಯಕ್ಷರೇ, 10 ಅಶ್ವಶಕ್ತಿ ವಿದ್ಯುತ್ ಮೋಟಾರ್‌ಗಳಿಗೆ ಮೀಟರ್ ಅಳವಡಿಸುವುದನ್ನು ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಟಿಪ್ಪಣಿಯಲ್ಲಿ ಮಾನ್ಯ ವಿದ್ಯುತ್ ಸಚಿವರು 31-3-1993ರ ಒಳಗೆ ಅದರ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತದೆಂದು ಹೇಳಿದ್ದಾರೆ. ಆದರೆ ಇದುವರೆಗೆ ಯಾವ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಇದನ್ನು ಇಲ್ಲಿಗೆ ಕೈಬಿಡುವುದು ಒಳ್ಳೆಯದೆಂದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. ಏತಕ್ಕೆಂದರೆ ಈಗಾಗಲೇ ಈ ರೀತಿಯ ವಿದ್ಯುತ್ ಸರಬರಾಜಿನಿಂದಾಗಿ ರೈತರು ಹಾಳಾಗಿಹೋಗಿದ್ದಾರೆ. ತಮಗೆ ತಿಳಿದಿರಬಹುದು ; ರಾತ್ರಿ ಹೊತ್ತಿನಲ್ಲಿ ಹೋದರೆ ಒಂದು ಪಂಪ್‌ಸೆಟ್ ಕೂಡ ಚಾಲುವಾಗುತ್ತಿಲ್ಲ. ಚಾಲುವಾದರೂ ಸಹಿತ ಸುಟ್ಟು ಹೋಗುತ್ತಿರುವುದರಿಂದ ರೈತರು ಹಾಳಾಗಿ ಹೋಗುತ್ತಿದ್ದಾರೆ. ದಯವಿಟ್ಟು ಇದನ್ನು ಪರಿಶೀಲನೆ ಮಾಡುವುದಕ್ಕೆ ಬದಲು ಅದನ್ನು ಕೈಬಿಟ್ಟಿದ್ದೇವೆಂದು ಉತ್ತರ ಕೊಟ್ಟರೆ ರೈತರಿಗೆ ಸಂತೋಷವಾಗುತ್ತದೆಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ನಾನು ತಿಳಿಸಿರತಕ್ಕದ್ದು 1993ನೇ ಇಸವಿ ಜನವರಿಯಲ್ಲಿ ವಿದ್ಯುತ್ ಸ್ಥಾವರ ಸಮ್ಮೇಳನದಲ್ಲಿ ತೆಗೆದುಕೊಳ್ಳಲಾಗಿರತಕ್ಕ ಅಥವಾ ಮೂಡಿಬಂದ ಭಾವನೆಗಳು. ಅದರಲ್ಲಿ ಹತ್ತು ರಾಜ್ಯಗಳು ಈಗಾಗಲೇ ಈ ದಿಕ್ಕಿನಲ್ಲಿ ಕಾರ್ಯೋನ್ಮುಖವಾಗಿ ಅವರು ಮೀಟರ್ ಜೋಡಿಸಿದ್ದಾರೆ. ಆದರೆ ನಮ್ಮ ರಾಜ್ಯದ ಮಟ್ಟಿಗೆ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಯಾವುದೇ ತೀರ್ಮಾನ ತೆಗೆದುಕೊಳ್ಳದೆ ಇರತಕ್ಕ ಹಿನ್ನೆಲೆಯಲ್ಲಿ ಹತ್ತು ಅಶ್ವಶಕ್ತಿಗಿಂತ ಕೆಳಗೆ ಇರತಕ್ಕ ಪಂಪುಸೆಟ್ಟುಗಳಿಗೆ ಇದೇ ರೀತಿ ಮುಂದುವರಿಯುತ್ತದೆಂಬುದು ನಿರ್ವಿವಾದ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ : ಮಾನ್ಯ ಮೇಟಿಯವರು ಮಾತನಾಡುತ್ತಾ, ಈ ನೀತಿಯನ್ನು ಕೈಬಿಡಬೇಕೆಂದು ಸರ್ಕಾರಕ್ಕೆ ಕೇಳುತ್ತಿದ್ದಾರೆ. ಈ ಸರ್ಕಾರಕ್ಕೆ ಆ ನೀತಿ ಕೈಬಿಡತಕ್ಕ ಶಕ್ತಿ ಇಲ್ಲವೆಂದು ನನ್ನ ಭಾವನೆ. ಏಕೆಂದರೆ ಇದು ರಾಷ್ಟ್ರಮಟ್ಟದಲ್ಲಿ ಒಂದು ತೀರ್ಮಾನವಾಗಿದೆ. ಇವತ್ತಲ್ಲ ನಾಳೆ ಮೀಟರ್ ಜೋಡಿಸುವಂತಹ ಕೇಂದ್ರದ ನೀತಿಗೆ ತಲೆಬಾಗುತ್ತೀರಿ. ಆದರೆ ಈ ನೀತಿ ಕೇಂದ್ರ ಸರ್ಕಾರ ರೂಪಿಸಿರುವುದಿಲ್ಲ. ನಮ್ಮ ದೇಶದ ರಾಷ್ಟ್ರೀಯ ಪವರ್ ಪಾಲಿಸಿ ವಾಷಿಂಗ್‌ಟನ್‌ನಲ್ಲಿ ತೀರ್ಮಾನವಾಗುತ್ತದೆ. ಆದರೆ ಪವರ್ ಸಬ್ಸಿಡಿ ತೆಗೆಯಬೇಕೆಂಬ ನೀತಿಯನ್ನು ನರಸಿಂಹರಾಯರಿಗೂ ಬದಲಾಯಿಸುವುದಕ್ಕಾಗುತ್ತಿಲ್ಲ.

ಆ ಕಾರಣ ನನ್ನ ಸಲಹೆ ಇಷ್ಟೇ. ಬೇರೆ ದೇಶದವರು ನಮ್ಮ ದೇಶದಲ್ಲಿ ಸಬ್ಸಿಡಿ ತೆಗೆಯಬೇಕೆಂದು ಹೇಳುತ್ತಿರಬಹುದು. ನಮ್ಮನ್ನು ಹಾಳು ಮಾಡುವುದಕ್ಕೆ, ಆದರೆ ನಾವು ಫ್ಲಾಟ್‌ರೇಟ್‌ಗೆ ಬಂದಿದ್ದೆವು. 1980ರಲ್ಲಿ ನಾವೇ ಈ ಸರ್ಕಾರದ ಜೊತೆ ಮಾತನಾಡಿ ಒಂದು ಹಾರ್ಸ್ ಪವರ್‌ಗೆ ಇಷ್ಟು ಫ್ಲಾಟ್ ರೇಟ್ ಎಂದು ಮಾಡಿದ್ದರು. ಏಕೆಂದರೆ ಮಿಟರ್ ಜೋಡಿಸಿದರೆ ನಮ್ಮ ಅನಕ್ಷರಸ್ಥ ಕ್ಷೇತ್ರದಲ್ಲಿ ಬಹಳ ಕಿರುಕುಳವಾಗುತ್ತದೆ. ನನ್ನ ಸಲಹೆ ಏನೆಂದರೆ ನೀವು ಉಚಿತವಾಗಿ ಕೊಡಬೇಡಿ, We want to be treated as consumer as far as power is concerned, but fix a flat rate once again. ಮಿಟರ್ ಜೋಡಿಸಿದರೆ ಬಹಳ ದೊಡ್ಡ ಗದ್ದಲವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ನಂಜುಂಡಸ್ವಾಮಿಯವರು ಮಾಡಿರತಕ್ಕ ರಚನಾತ್ಮಕ ಸಲಹೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ವಿಷಯ : ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ.

Q : 1726

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಹಾಬಾಳ (ಟಿ) ಸಮೀಪ ಏತ ನೀರಾವರಿ ಯೋಜನೆ ಕಾಗಿನ ನದಿಗೆ 1992-93ನೇ ಸಾಲಿನಲ್ಲಿ ಮಂಜೂರಾಗಿ ಪ್ರಾರಂಭ ಮಾಡಲು ಆದೇಶಿಸಿದ್ದು ಇಲ್ಲಿಯವರೆಗೆ ಈ ಕಾಮಗಾರಿಯನ್ನು ಪ್ರಾರಂಭ ಮಾಡದಿರಲು ಕಾರಣಗಳೇನು?

ಆ) ಈಗಲಾದರೂ ಸಹ 1992-93ನೇ ಸಾಲಿಗಾಗಿ ಮಂಜೂರಾಗಿರುವ ಈ ಏತ ನೀರಾವರಿ ಯೋಜನೆಯನ್ನು ಪ್ರಾರಂಭಮಾಡಿ ಆ ಭಾಗದ ರೈತರಿಗೆ ನೀರಾವರಿ ಅನುಕೂಲ ಮಾಡಿಕೊಡಲಾಗುವುದೇ?

ಡಾ॥ ಆರ್. ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಈ ಯೋಜನೆ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದ ಕಾರ್ಯಕ್ರಮದಲ್ಲಿ ಸೇರಿದ್ದು, ಈಗಾಗಲೇ ಇದರ ಅಂದಾಜು ಪಟ್ಟಿಯನ್ನು 28,879 ಲಕ್ಷ ರೂ.ಗಳಿಗೆ ತಯಾರಿಸಲಾಗಿದೆ. ಆದರೆ ಫಲಾನುಭವಗಳು ನೀರಿನ ದರವನ್ನು ಭರಿಸಲು ಸಿದ್ಧರಿಲ್ಲವಾದ ಕಾರಣ ಈ ಯೋಜನೆಯನ್ನು ಪರಿಗಣಿಸಲಾಗುತ್ತಿಲ್ಲ.

ಆ) ನಿಗಮದ ನಿಬಂಧನೆಗಳಿಗೆ ಫಲಾನುಭವಿಗಳು ಬದ್ಧರಾಗಿ ಮುಚ್ಚಳಿಕೆ ಬರೆದುಕೊಟ್ಟರೆ ಈ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ನಾನು ಕೇಳಿದ್ದುದು ಕೇವಲ ಹಾಬಾಳ (ಟಿ)